ಒಟ್ಟು ಪ್ರಶ್ನೆಗಳ ಸಂಖ್ಯೆ : 26 ]
Total No. of Questions : 26 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7
[ Total No. of Printed Pages : 7

**ಸಂಕೇತ ಸಂಖ್ಯೆ : 244-K (NS)**

**Code No. : 244-K (NS)**

# ಡಿ.ಇಡಿ. ದ್ವಿತೀಯ ವರ್ಷ

# D.Ed. SECOND YEAR

# ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( HPS )
# FIRST LANGUAGE — KANNADA

**(ಹೊಸ ಪಠ್ಯವಸ್ತು)**

**(New Syllabus)**

ದಿನಾಂಕ : 10. 12. 2018 ]
Date : 10. 12. 2018 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ]
Time : 2.00 P.M. to 5.00 P.M. ]

[ ಗರಿಷ್ಠ ಅಂಕಗಳು : 60
[ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. ಮಗುವಿನ ಆಲೋಚನೆಗಳನ್ನು ಹೊರಹಾಕುವ ಮಾಧ್ಯಮ

(A) ಶಾಲೆ (B) ಮನೆ

(C) ಭಾಷೆ (D) ಪರಿಸರ

2. ವಾಕ್ಯಗಳು ಔಪಚಾರಿಕವಾಗಿದ್ದು ಎಲ್ಲಾ ರೀತಿಯ ಓದುಗರಿಗೂ ನಿಲುಕುವಂತಿರುವ ಕನ್ನಡ

(A) ಪ್ರಾದೇಶಿಕ ಕನ್ನಡ

(B) ಗ್ರಾಮ್ಯ ಕನ್ನಡ

(C) ಆಡುನುಡಿ ಕನ್ನಡ

(D) ಗ್ರಾಂಥಿಕ ಕನ್ನಡ

3. 5E ಮಾದರಿಯ ಬೋಧನಾ ಕಲಿಕಾ ಪ್ರಕ್ರಿಯೆ ...................... ಸಿದ್ಧಾಂತವನ್ನು ಆಧರಿಸಿದೆ.

(A) ಸಮೀಕ್ಷವಾದ

(B) ಪ್ರತ್ಯಕ್ಷವಾದ

(C) ರಚನಾವಾದ

(D) ಬ್ಲೂಮರನವಾದ

4. ವ್ಯಾಕರಣ ಬೋಧನೆಯ ಉದ್ದೇಶ ಭಾಷೆಯ ಬಳಕೆಯನ್ನು

I. ಅರ್ಥಪೂರ್ಣವಾಗಿಸುವುದು

II. ಸಮೃದ್ಧಗೊಳಿಸುವುದು

III. ವೈವಿಧ್ಯಮಯಗೊಳಿಸುವುದು

IV. ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುವುದು

*ಇವುಗಳಲ್ಲಿ :*

(A) I ಮಾತ್ರ ಸರಿ

(B) II ಮತ್ತು III ಸರಿ

(C) I ಮತ್ತು IV ಸರಿ

(D) ಇವುಗಳೆಲ್ಲವೂ ಸರಿ

5. ಭಾಷೆ ಕಲಿಯುವುದು ಎಂದರೆ

I. ಬರೀ ಪದಗಳನ್ನು ಉಚ್ಚರಿಸುವುದು

II. ಭಾವನೆಗಳನ್ನು ಅಭಿವ್ಯಕ್ತಿಸುವುದು

III. ವಿಚಾರಗಳನ್ನು ಹಂಚಿಕೊಳ್ಳುವುದು

IV. ಬೇರೆ ಭಾಷೆಯನ್ನು ತಿರಸ್ಕರಿಸುವುದು

*ಇವುಗಳಲ್ಲಿ :*

(A) I ಮತ್ತು IV ಸರಿ (B) II ಮತ್ತು III ಸರಿ

(C) II ಮತ್ತು IV ಸರಿ (D) I ಮತ್ತು III ಸರಿ

6. ನಿಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳು ತಮ್ಮ ವಿಚಾರಗಳನ್ನು ಸ್ಪಷ್ಟ ಮಾತುಗಳಲ್ಲಿ ಅಭಿವ್ಯಕ್ತಿಸಿ, ಮಾತಿನಲ್ಲಿ ಬದಲಾವಣೆ ತಂದು, ಉದಾಹರಣೆಗಳನ್ನು ಬಳಸಬಲ್ಲವರಾಗಿದ್ದರೆ. ಅವರು

(A) ಅವಲಂಬಿತರು (B) ಅರೆ ಅವಲಂಬಿತರು

(C) ಮಂದಗತಿಯ ಕಲಿಕಾದಾರರು (D) ಸ್ವತಂತ್ರ ಕಲಿಕಾದಾರರು

7. ಪದ ಹಾಗೂ ಅದರ ಅರ್ಥ ನೀಡುವ ಚಿತ್ರಗಳನ್ನು ಹೊಂದಿಸುವುದು ಈ ಕೆಳಗಿನ ಯಾವ ಮೂಲ ಕೌಶಲಕ್ಕೆ ಸಂಬಂಧಿಸಿದೆ

(A) ಬರವಣಿಗೆ (B) ಆಲಿಸುವುದು

(C) ಮಾತನಾಡುವುದು (D) ಓದುವುದು

8. ಲೇಖನದ ಸಾರ ತಿಳಿಸುವುದೇ

(A) ದಿನಚರಿ (B) ಮಾರ್ಗದರ್ಶಿತ ಪ್ರಬಂಧ

(C) ಸಾರಾಂಶ (D) ವರದಿ

9. ನಮ್ಮ ಚಿಂತನೆಯನ್ನು ಪ್ರಸ್ತುತಪಡಿಸುವ ಚಿತ್ರ

(A) ಆಲಿಸುವಿಕೆ (B) ಮಾತನಾಡುವಿಕೆ

(C) ಓದುವಿಕೆ (D) ಬರವಣಿಗೆ

10. ವಿದ್ಯಾರ್ಥಿಗಳಲ್ಲಿ ವಾಕ್ಯರಚನೆ ಮಾಡುವ ಕೌಶಲವನ್ನು ಅಭಿವೃದ್ಧಿಪಡಿಸಲು ಇರುವ ಒಂದು ತಂತ್ರ

(A) ಓದುವ ವಾಕ್ಯ (B) ಬೆಳೆಯುವ ವಾಕ್ಯ

(C) ಸವಿಯುವ ವಾಕ್ಯ (D) ತಿಳಿಸುವ ವಾಕ್ಯ

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ತರಗತಿಯಲ್ಲಿ ಕಲಿಕೆಯ ಸಾರುವೆಯ ಕೆಲಸ ಹೇಗೆ ನಡೆಯುತ್ತದೆಂಬುದನ್ನು ವಿವರಿಸಿ.

12. "ತಾದಾತ್ಮ್ಯ ಕಾಳಜಿ ಬೆಳೆಸಲು ನಾಟಕ ಪ್ರಭಾವಶಾಲೀ ಮಾಧ್ಯಮ." ಏಕೆ ?

13. ಕಲಿಕೆಯ ಸಮಸ್ಯೆಯುಳ್ಳವರಿಗೆ ಒಳಗೊಳ್ಳುವ ತರಗತಿಗಳಲ್ಲಿ ಮೌಖಿಕ ಕೌಶಲಗಳನ್ನು ಹೇಗೆ ಅನುಕೂಲಿಸಬಹುದು ?

14. ಕಲಿಕಾದಾರರನ್ನು ಉತ್ತಮ ಓದುಗರನ್ನಾಗಿಸಲು ಅನುಕೂಲಕಾರರು ಗಮನಿಸಬೇಕಾದ ಅಂಶಗಳು ಯಾವುವು ?

15. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿಪಡಿಸಲು ಶಿಕ್ಷಕರು ಅನುಕೂಲಿಸುವ ಯಾವುದಾದರೂ ಎರಡು ಬರವಣಿಗೆ ಚಟುವಟಿಕೆಗಳನ್ನು ವಿವರಿಸಿ.

16. V ನೇ ತರಗತಿಯ ವಿದ್ಯಾರ್ಥಿಗಳಿಗೆ ಈಗಾಗಲೇ ಕ್ರಿಯಾಪದದ ಅರ್ಥ ತಿಳಿದಿದೆ. ಶಿಕ್ಷಕರು ಕಾಲಸೂಚಕ ಕ್ರಿಯಾಪದಗಳನ್ನು ಬೋಧಿಸುತ್ತಾರೆ. ನಂತರ ವಿದ್ಯಾರ್ಥಿಗೆ KWL ಚಾರ್ಟನ್ನು ನೀಡಿ ಅದರಲ್ಲಿ ಸೂಕ್ತ ವಿವರಗಳನ್ನು ತುಂಬಿಸಲು ತಿಳಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ KWL ಚಾರ್ಟನ್ನು ತಯಾರಿಸಿ.

17. ನಿಬಂಧಕ್ಕೂ ಪ್ರಬಂಧಕ್ಕೂ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

18. ತರಗತಿಯಲ್ಲಿ ಸಾಹಿತ್ಯವನ್ನು ಬಳಸುವಾಗ ಗಮನಿಸಬೇಕಾದ ಅಂಶಗಳು ಯಾವುವು ?

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಮತ್ತು 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : 8 × 5 = 40

19. ಅ) "ಅನುಭವವೇ ಮಾನವನ ನಿಜವಾದ ಪಾಠಶಾಲೆ." ಈ ನುಡಿಮುತ್ತನ್ನು ಸೂಕ್ತ ಉದಾಹರಣೆಗಳೊಂದಿಗೆ ಸಮರ್ಥಿಸಿ.

***ಅಥವಾ***

ಆ) ಈ ಕೆಳಗಿನ ಚಿತ್ರ ನೋಡಿ ಒಂದು ಪುಟದಷ್ಟು ಕಥೆ ಬರೆದು ಶೀರ್ಷಿಕೆಯನ್ನು ನೀಡಿ :



20. ಅ) ಭಾಷಾ ಕಲಿಕೆಯನ್ನು ಅನುಕೂಲಿಸಬಲ್ಲ ಶ್ರೀಮಂತ ಸಂಪನ್ಮೂಲಗಳು ಯಾವುವು ? ಇವು ಕಲಿಕೆಗೆ ಹೇಗೆ ಉಪಯುಕ್ತವಾಗಿದೆ ?

***ಅಥವಾ***

ಆ) ನಮ್ಮ ದಿನನಿತ್ಯದ ಜೀವನದಲ್ಲಿ ಭಾಷೆಯು ಯಾವ ಯಾವ ಸ್ತರಗಳಲ್ಲಿ ಉಪಯೋಗಕ್ಕೆ ಬೀಳುತ್ತದೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

21. ಅ) ಕಲಿಕೆ ಕಟ್ಟಿಕೊಡುವ ಭಾಷೆ ಮಗುವಿನ ಆಪ್ತಭಾಷೆಯಾಗಿರಬೇಕು. ಏಕೆ ?

***ಅಥವಾ***

ಆ) ಸೃಜನಶೀಲ ಅಭಿವ್ಯಕ್ತಿ ಎಂದರೇನು ? ನೀವು ನಿಮ್ಮ ತರಗತಿಯ ವಿದ್ಯಾರ್ಥಿಗಳಲ್ಲಿ ಸೃಜನಶೀಲ ಅಭಿವ್ಯಕ್ತಿಯನ್ನು ಬೆಳೆಸುವಲ್ಲಿ ಗಮನಿಸಬೇಕಾದ ಅಂಶಗಳು ಯಾವುವು ?

22. ಅ) ರಚನವಾದಿ ಸಿದ್ಧಾಂತ ಆಧರಿಸಿದ ವಿಧಾನದಲ್ಲಿ VI ನೇ ತರಗತಿಯ ಯಾವುದಾದರೂ ಒಂದು ಘಟಕಕ್ಕೆ ಎಲ್ಲಾ ಹಂತಗಳನ್ನೊಳಗೊಂಡ ಪಾಠಯೋಜನೆಯನ್ನು ತಯಾರಿಸಿ.

***ಅಥವಾ***

ಆ) 5E ವಿಧಾನದಲ್ಲಿ ಪಾಠಬೋಧನೆ ಮಾಡುವಾಗ ಭಾಷಾಕಲಿಕೆ ಅನುಕೂಲಿಸುವ ವಿಧಾನಗಳು ಯಾವವು ? ವಿದ್ಯಾರ್ಥಿಗಳಲ್ಲಿ ಸಕ್ರಿಯ ಆಲಿಸುವಿಕೆಯನ್ನು ಮೂಡಿಸಲು ಇರುವ ಯಾವುದಾದರೂ ಎರಡು ತಂತ್ರಗಳನ್ನು ಹೆಸರಿಸಿ, ವಿವರಿಸಿ.

23. ಅ) ವಿದ್ಯಾರ್ಥಿಗಳಲ್ಲಿ ಸಕ್ರಿಯ ಆಲಿಸುವಿಕೆಯನ್ನು ಮೂಡಿಸಲು ಇರುವ ತಂತ್ರಗಳನ್ನು ಹೆಸರಿಸಿ. ಯಾವುದಾದರೂ ಎರಡನ್ನು ವಿವರಿಸಿ.

***ಅಥವಾ***

ಆ) "ವಿದ್ಯಾರ್ಥಿಗಳು ಸಹಜ ಸಂದರ್ಭದ ಅಭಿವ್ಯಕ್ತಿಯ ಮಿತಿಗಳನ್ನು ಮೀರುವಂತೆ ಶಿಕ್ಷಕರು ತರಗತಿ ಅನುಭವಗಳನ್ನು ನೀಡುವುದು ಸೂಕ್ತ." ಸಮರ್ಥಿಸಿ.

24. ಅ) ನಿಮ್ಮ ತರಗತಿಯ ವಿದ್ಯಾರ್ಥಿಗಳಲ್ಲಿ ಮೌಖಿಕ ಅಭಿವ್ಯಕ್ತಿಯನ್ನು ಬೆಳೆಸಲು ಯಾವ ಚಟುವಟಿಕೆಗಳನ್ನು ಆಯೋಜಿಸುತ್ತೀರಿ ? ಅವುಗಳಲ್ಲಿ ಎರಡನ್ನು ವಿವರಿಸಿ.

***ಅಥವಾ***

ಆ) ಕಲಿಕೆಯ ಸಮಸ್ಯೆವುಳ್ಳ ವಿದ್ಯಾರ್ಥಿಗಳು ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವಲ್ಲಿ ನೀವು ಆಯೋಜಿಸುವ ಕಲಿಕಾ ಅನುಭವಗಳನ್ನು ಪಟ್ಟಿ ಮಾಡಿ.

25. ಅ) ಓದನ್ನು ಪ್ರೋತ್ಸಾಹಿಸುವಲ್ಲಿ ಓದುಗರ ಕ್ಲಬ್ ಹಾಗೂ ತರಗತಿ ಗ್ರಂಥಾಲಯದ ಪಾತ್ರವನ್ನು ವಿವರಿಸಿ.

***ಅಥವಾ***

ಆ) ನಿಮ್ಮ ಇಷ್ಟವಾದ ಕಥೆಗೆ ಕಾರಣ, ಪರಿಣಾಮಗಳನ್ನು ಗುರುತಿಸಿ ಅನುಕೂಲಿಸುವ ಒಂದು ರೇಖನ ಸಂಯೋಜಕ (ಗ್ರಾಫಿಕ್ ಆರ್ಗನೈಸರ್)ವನ್ನು ರಚಿಸಿ.

26. ಅ) ಬರವಣಿಗೆಯನ್ನು ಸ್ವ–ಕಲಿಕೆಯ ಸಾಧನವನ್ನಾಗಿ ಬಳಸಬಹುದೆ ? ಈ ಹೇಳಿಕೆಯನ್ನು ಸಮರ್ಥಿಸಿ.

**ಅಥವಾ**

ಆ) ಸಾರಾಂಶಿಸುವುದು ಹಾಗೂ ನಿಬಂಧ ರಚನೆ – ಈ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಬರಹವನ್ನು ಹೇಗೆ ಅನುಕೂಲಿಸಬಹುದು ? ಚರ್ಚಿಸಿ.